ಕರ್ನಾಟಕ ವಿಧಾನ ಸಭೆ, ಸಂಶೋಧನೆ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ   ದಿನಾಂಕ : DATE 8/2/2020

# ಕೇರಳ ರಾಜ್ಯ ಬಜೆಟ್ ಮುಖಪುಟದಲ್ಲಿ ಗಾಂಧೀಜಿ ಹತ್ಯೆ ಚಿತ್ರ!




**ತಿರುವನಂತಪುರಂ:** ಕೇರಳದ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗ ಸರ್ಕಾರ ಶುಕ್ರವಾರ ಮಂಡಿಸಿದ ಬಜೆಟ್‌ನ ಮುಖಪುಟದಲ್ಲಿ ಮಹಾತ್ಮಾ ಗಾಂಧಿ ಹತ್ಯೆಯ ಚಿತ್ರ ಮುದ್ರಿಸಿದ್ದು, ಅದು ವಿವಾದಕ್ಕೆ ಕಾರಣವಾಗಿದೆ. ಬಜೆಟ್‌ನ ಮುಖಪುಟದಲ್ಲಿ ಗುಂಡು ತಾಗಿದ್ದರಿಂದ ಗಾಂಧೀಜಿ ಅವರಿಗೆ ರಕ್ತಸ್ರಾವ ಆಗುತ್ತಿರುವುದು ಹಾಗೂ ಅವರು ಕುಸಿದು ಬಿದ್ದಿರುವ ಚಿತ್ರವಿದೆ. ಇದು ವಿವಾದಕ್ಕೀಡಾಗುತ್ತಿದ್ದಂತೆಯೇ ಕೇರಳದ ವಿತ್ತ ಸಚಿವ ಥಾಮಸ್ ಐಸಾಕ್ ಸ್ಪಷ್ಟನೆ ನೀಡಿದ್ದಾರೆ. 'ಇದೊಂದು ರಾಜಕೀಯ ಸಂದೇಶ. ಕಲಾವಿದರೊಬ್ಬರು ಗಾಂಧೀಜಿ ಹತ್ಯೆ ದೃಶ್ಯದ ಚಿತ್ರ ರಚಿಸಿದ್ದಾರೆ. ಗಾಂಧೀಜಿ ಹಂತಕರನ್ನು ನಾವು ಮರೆಯಲ್ಲ ಎಂಬ ಸಂದೇಶ ರವಾನಿಸಿದ್ದೇವೆ' ಎಂದರು.